# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1488
2. ಸದಸ್ಯರ ಹೆಸರು : ಶ್ರೀ ಮಧು ಜಿ.ಮಾದೇಗೌಡ (ಪದವೀಧರ ಕ್ಷೇತ್ರ)
3. ಉತ್ತರಿಸುವ ದಿನಾಂಕ : 20.03.2025
4. ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿಗಳು

| ಕ್ರ. ಸಂ. | ಪ್ರಶ್ನೆ | ಉತ್ತರಗಳು |
|---|---|---|
| ಅ) | ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರ ಹಾಗೂ ಕಾವೇರಿ ಜಲ ನಿಯಂತ್ರಣಾ ಸಮಿತಿಯ ಕಾರ್ಯನಿರ್ವಹಣೆಗೆ ಸಂಬಂಧಿಸಿದಂತೆ ತಗಲುವ ವೆಚ್ಚವನ್ನು ರಾಜ್ಯ ಸರ್ಕಾರ ಪ್ರತಿ ವರ್ಷ ಭರಿಸಬೇಕಿದೆಯೇ: (ಸಂಪೂರ್ಣ ಮಾಹಿತಿ ನೀಡುವುದು) | ಹೌದು.<br>ಕಾವೇರಿ ಜಲ ವಿವಾದ ನ್ಯಾಯಾಧಿಕರಣದ ದಿನಾಂಕ: 05.02.2009 ರ ಆದೇಶವನ್ನು ಮಾರ್ಪಡಿಸಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ:16.02.2018 ರಂದು ನೀಡಿರುವ ಆದೇಶದ ಅನುಷ್ಠಾನಕ್ಕಾಗಿ ರಚಿಸಲಾಗಿರುವ ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರದ(Cauvery Water Management Authority-CWMA) ಅಧಿಸೂಚನೆ ದಿನಾಂಕ: 01.06.2018ರ ಕ್ರ.ಸಂ. 14 (ii) ರಲ್ಲಿ ತಿಳಿಸಿರುವಂತೆ, ಕಾವೇರಿ ಜಲ ನಿರ್ವಹಣಾ ಪ್ರಾಧಿಕಾರ(CWMA) ಹಾಗೂ ಅದರ ಅಡಿಯಲ್ಲಿ ನಿರ್ವಹಿಸುವ ಕಾವೇರಿ ಜಲ ನಿಯಂತ್ರಣ ಸಮಿತಿ(CWRC)ಯ ಖರ್ಚು-ವೆಚ್ಚಗಳನ್ನು ಕೇರಳ, ಕರ್ನಾಟಕ, ತಮಿಳುನಾಡು ಹಾಗೂ ಪುದುಚೇರಿ ರಾಜ್ಯಗಳು 15:40:40:05ರ ಅನುಪಾತದಲ್ಲಿ ಭರಿಸಬೇಕಾಗಿರುತ್ತದೆ. ಸದರಿ ವೆಚ್ಚವು ಪುನರಾವರ್ತಿತ ವೆಚ್ಚವಾಗಿರುತ್ತದೆ. |
| ಆ) | ಇದ್ದಲ್ಲಿ, ರಾಜ್ಯ ಸರ್ಕಾರ ಭರಿಸಬೇಕಾದ ವೆಚ್ಚದ ಪಾಲು ಎಷ್ಟು: ಇದು ಪುನರಾವರ್ತಿತ ವೆಚ್ಚವೇ: | |
| ಇ) | ಸರ್ಕಾರ ಸದರಿ ವೆಚ್ಚವನ್ನು ಯಾವ ವರ್ಷದಿಂದ ಪಾವತಿಸಿಕೊಂಡು ಬರುತ್ತಿದೆ: ಈವರೆವಿಗೂ ಪಾವತಿಸಿರುವ ಮೊತ್ತ ಎಷ್ಟು: (ವರ್ಷವಾರು ಪಾವತಿಸಿರುವ ಮೊತ್ತದ ಮಾಹಿತಿಯನ್ನು ನೀಡುವುದು) | 2018-19 ನೇ ಆರ್ಥಿಕ ವರ್ಷದಿಂದ ಕಾವೇರಿ ಜಲ ನಿರ್ಹಣಾ ಪ್ರಾಧಿಕಾರ(CWMA)ದ ಕೋರಿಕೆಯನ್ವಯ ಕಾವೇರಿ ನೀರಾವರಿ ನಿಗಮದಿಂದ ವೆಚ್ಚವನ್ನು ಭರಿಸಲಾಗುತ್ತಿದ್ದು, ವರ್ಷವಾರು ಭರಿಸಿರುವ ವೆಚ್ಚದ ವಿವರಗಳು ಈ ಕೆಳಕಂಡಂತಿವೆ:<br><br>ವರ್ಷ — ಮೊತ್ತ (ರೂ.ಲಕ್ಷಗಳಲ್ಲಿ)<br>2018-19 — 80.00<br>2019-20 — -<br>2020-21 — 320.00<br>2021-22 — 320.00<br>2022-23 — 400.00<br>2023-24 — 480.00<br>2024-25 — 380.00 |
| ಈ) | ಕಾವೇರಿ ನದಿ ನಿರ್ವಹಣಾ ಪ್ರಾಧಿಕಾರ ಹಾಗೂ ಕಾವೇರಿ ಜಲ ನಿಯಂತ್ರಣಾ ಸಮಿತಿಗೆ ಮಾಹಿತಿ ಹಾಗೂ ಅಂಕಿಅಂಶಗಳನ್ನು ಒದಗಿಸಲು ಸಮಿತಿಯನ್ನು ರಚಿಸಲಾಗಿದೆಯೇ: | ಯಾವುದೇ ಸಮಿತಿ ರಚಿಸಲಾಗಿವುರುದಿಲ್ಲ. |
| ಉ) | ಇದ್ದಲ್ಲಿ, ಈ ಸಮಿತಿಯಲ್ಲಿ ಯಾರು ಯಾರು ಇದ್ದಾರೆ: ಸಮಿತಿಯ ಕಾರ್ಯನಿರ್ವಹಣೆ ಕುರಿತು ಸಂಪೂರ್ಣ ಮಾಹಿತಿ ನೀಡುವುದು? | |

**ಸಂಖ್ಯೆ: ಜಸಂಇ 12 ಕಾವಿಇ 2025**

(ಡಿ.ಕೆ.ಶಿವಕುಮಾರ್)
ಉಪ ಮುಖ್ಯಮಂತ್ರಿ